

# ಶಂಕರಾಚಾರ್ಯರ ಸ್ತೋತ್ರ ಕೃತಿಗಳಲ್ಲಿ ಭಕ್ತಿಭಾವ

ಸ್ವಾಮಿ ಸುರೇಶಾನಂದ

**ಜ್ಞಾನಪ್ರಧಾನವಾದ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿರುವ ಶ್ರೀಶಂಕರಾಚಾರ್ಯರು ಭಕ್ತಿಗೆ ಎಷ್ಟೊಂದು ಪ್ರಾಧಾನ್ಯವನ್ನು ನೀಡಿದ್ದಾರೆಂಬುದನ್ನು ಸ್ವಾಮಿ ಸುರೇಶಾನಂದರು ಈ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮೀಜಿಯವರು ಈಗ ಬಿಳಿಗಿರಿ ರಂಗನ ಬೆಟ್ಟದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.**

## ಅದ್ವೈತ ಸಿದ್ಧಾಂತ

ಅದ್ವೈತ ವೇದಾಂತ ಹಾಗೂ ಶಂಕರಾಚಾರ್ಯರ ಹೆಸರುಗಳು ಪರ್ಯಾಯ ಶಬ್ದಗಳಂತಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಅದ್ವೈತ ವೇದಾಂತದ ಮೂಲವನ್ನು ನಾವು ಉಪನಿಷತ್ತುಗಳಲ್ಲೇ ಕಾಣಬಹುದಾದರೂ ಆ ವಾಕ್ಯಗಳನ್ನು ಆಧಾರವಾಗಿಟ್ಟುಕೊಂಡು ಪ್ರಬಲವಾದ ತರ್ಕಯುಕ್ತಿಗಳನ್ನು ಅಳವಡಿಸಿ ಆ ವಾಕ್ಯಗಳಿಗೆ ಅದ್ವೈತದಲ್ಲೇ ಪರಮತಾತ್ಪರ್ಯ ಎಂದು ಸಾಧಿಸಿ ಅದನ್ನು ಒಂದು ದರ್ಶನವನ್ನಾಗಿ, ತತ್ತ್ವಶಾಸ್ತ್ರವನ್ನಾಗಿ ಜಗತ್ತಿಗೆ ಸಾರಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಆದರೂ ಅದ್ವೈತವಾದ ಅವರಿಗಿಂತಲೂ ಹಿಂದೆ ಪ್ರಚಲಿತವಾಗಿತ್ತೆನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಶಂಕರರ ಪರಮಗುರುವೆಂದು ಗುರುತಿಸಲ್ಪಟ್ಟಿರುವ ಗೌಡಪಾದರು ಮಾಂಡೂಕ್ಯ ಉಪನಿಷತ್ತಿಗೆ ಬರೆದಿರುವ ವ್ಯಾಖ್ಯಾನ (ಕಾರಿಕೆ) ಈ ಸಿದ್ಧಾಂತದ ಒಂದು ಪ್ರಮುಖ ಗ್ರಂಥವಾಗಿದೆ. ಕಾರಿಕೆಗಳು ಮತ್ತು ಅದಕ್ಕೆ ಶಂಕರರು ಬರೆದಿರುವ ಭಾಷ್ಯ ಶ್ರುತಿಯನ್ನೇ ಪ್ರಮಾಣವಾಗಿ ಸ್ವೀಕರಿಸಿದ್ದರೂ, ಕೇವಲ ಯುಕ್ತಿಯಿಂದಲೂ ಈ ಸಿದ್ಧಾಂತವನ್ನು ನಿರೂಪಿಸುವುದು ಸಾಧ್ಯ ಎನ್ನುವುದನ್ನು ತೋರಿಸಿಕೊಡುತ್ತವೆ.

ಗೌಡಪಾದ ಮತ್ತು ಶಂಕರರ ವಾದದಂತೆ ಅದ್ವೈತವೆನ್ನುವುದು ಸತ್ಯವನ್ನು ಸಾರುವ ಶಾಸ್ತ್ರವೂ ಅಲ್ಲ, ವಾದವೂ ಅಲ್ಲ. ಅದು ಪರಮಾರ್ಥ ಸತ್ಯವೇ. **ಅದ್ವೈತಂ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ|** (ಮಾಂಡೂಕ್ಯಕಾರಿಕಾ, ಅದ್ವೈತ ಪ್ರಕರಣ, ಕಾರಿಕೆ ೧೮). ಈ ಭೇದವು (ದ್ವೈತವು) ಅದರದ್ದೇ (ಅದ್ವೈತದ್ದೇ)ಭೇದ ಎನ್ನುತ್ತಾರೆ ಅವರು. ಮುಂದಿನ ಕಾರಿಕೆಯಲ್ಲಿ ಮಾಯೆಯಿಂದಾಗಿ ಈ ಭೇದ ಕಾಣಿಸಿಕೊಳ್ಳುತ್ತದೆ, ಅದ್ವೈತ(ಸತ್ಯ)ವಾದದ್ದು ಬೇರೆ ಯಾವ ಕಾರಣದಿಂದಲೂ ದ್ವೈತವಾಗಿ ತೋರಲು ಸಾಧ್ಯವಿಲ್ಲ ಎನ್ನುತ್ತಾರೆ.

## ಮಾಯೆ ಎಂದರೇನು?

ಪರಮಾರ್ಥ ಸತ್ಯ ಏಕವೇವಾದ್ವಿತೀಯವಾಗಿದ್ದು ಇಂದ್ರಿಯ ಮನಸ್ಸುಗಳಿಗೆ ಗೋಚರವಾಗದಿದ್ದಲ್ಲಿ ( *ಅವಾಙ್ಮಾನಸಗೋಚರ* ), ಇಂದ್ರಿಯಗೋಚರವಾದ ದ್ವೈತಾತ್ಮಕವಾದ ಬಾಹ್ಯಪ್ರಪಂಚದ ಕಥೆ ಏನು? ನ ಹಿ ದೃಷ್ಟೇ ಅನುಪಪನ್ನಮ್ ನಾಮ—ಕಣ್ಣಿಗೆ ಕಾಣುತ್ತಿರುವುದನ್ನು ಇಲ್ಲವೆನ್ನಲಾಗದು. ಅದ್ವೈತ ವೇದಾಂತದಲ್ಲಿ ಹಾಗೆ ಕಾಣತಕ್ಕದ್ದನ್ನು ಮಿಥ್ಯಾ ಎನ್ನುತ್ತಾರೆ. ಸತ್ಯವೆಂದಾಗಲಿ, ಅಸತ್ಯವೆಂದಾಗಲೀ (**ಸದಸದ್ಭ್ಯಾಂ ಅನಿರ್ವಚನೀಯಮ್**) ಹೇಳಲಿಕ್ಕಾಗದ ವಸ್ತುವನ್ನು ಮಿಥ್ಯಾ ಎಂಬುದಾಗಿ ಕರೆದಿದ್ದಾರೆ. ಇರತಕ್ಕ ಸತ್ಯ ಒಂದೇ ಆಗಿರುವುದರಿಂದಲೂ ಅದು ಕಾರ್ಯಕಾರಣಗಳಿಗೆ ಮೀರಿದ್ದಾಗಿಯೂ, ಇಂದ್ರಿಯಾತೀತವಾಗಿಯೂ ಇರುವುದರಿಂದ ಈ ದ್ವೈತಾತ್ಮಕ ಪ್ರಪಂಚಕ್ಕೆ ನೇರವಾಗಿ ಕಾರಣವನ್ನಾಗಿ ಹೇಳಲು ಸಾಧ್ಯವಿಲ್ಲವಾದ್ದರಿಂದ ಮಾಯಾಶಕ್ತಿಯಿಂದ ಆ ಪರಬ್ರಹ್ಮ ಇದೆಲ್ಲಕ್ಕೂ ಕಾರಣವಾಗುತ್ತದೆ ಎನ್ನುತ್ತಾರೆ. ನೇಹ ನಾನಾಸ್ತಿ ಕಿಂಚನ ಎಂಬುದಾಗಿ ಅದ್ವೈತವನ್ನು ಸಾಧಿಸಿ ಆಮೇಲೆ ಮಾಯೆಯೆನ್ನುವ ವಸ್ತ್ವಂತರವನ್ನು ಒಪ್ಪಿದಂತಾಯಿತಲ್ಲ? ಈ ಕುರಿತಾಗಿ ದಾರ್ಶನಿಕರಲ್ಲುಂಟಾದ ವಾದವಿವಾದಗಳ ಕುರಿತು ಅನೇಕ ಗ್ರಂಥಗಳೇ ರಚಿಸಲ್ಪಟ್ಟಿವೆ. ವೇದಾಂತದ ರೀತ್ಯಾ ಒಂದು ವಸ್ತುವು ತನ್ನಲ್ಲಿ ಸ್ವರೂಪತಃ ಯಾವ ಬದಲಾವಣೆಯನ್ನೂ ಹೊಂದದೆ ಇನ್ನೊಂದು ರೀತಿಯಲ್ಲಿ ಕಂಡರೆ ಆ ಕಾಣತಕ್ಕ ವಸ್ತುವನ್ನು ಮಿಥ್ಯಾ ಎನ್ನುತ್ತಾರೆ. ಅಂತೆಯೇ ಪರಬ್ರಹ್ಮವಸ್ತು ತನ್ನಲ್ಲಿ ಯಾವ ಬದಲಾವಣೆಯೂ ಇಲ್ಲದೆ ಜಗತ್ತಾಗಿ ತೋರುತ್ತದೆ. ಲೋಕಾನುಭವದಲ್ಲೂ ನಮಗೆ ಹೀಗಾಗುವುದುಂಟು. ಮಾಯೆ ಅಥವಾ ಮಿಥ್ಯೆ ಎಂದರೇನು ಎನ್ನುವುದನ್ನು ವಿವರಿಸುವುದು ಈ ಲೇಖನದ ಉದ್ದೇಶವಲ್ಲವಾದ್ದರಿಂದ ಸ್ವಾಮಿ ವಿವೇಕಾನಂದರು ಇದನ್ನು ಕುರಿತು ಏನು ಹೇಳಿದ್ದಾರೆ ಎನ್ನುವುದನ್ನು ನೋಡಿ ಈ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸೋಣ : 'ವೇದಾಂತದಲ್ಲಿ ಬರುವ ಪೂರ್ಣರೂಪವನ್ನು ಪಡೆದ ಮಾಯಾಭಾವನೆಯು ಭಾವಸತ್ತಾವಾದವೂ ಅಲ್ಲ, ವಸ್ತುಸತ್ತಾವಾದವೂ ಅಲ್ಲ. ಅದೊಂದು ಸಿದ್ಧಾಂತವೇ ಅಲ್ಲ. ಅದೊಂದು ವಾಸ್ತವ ಸ್ಥಿತಿಯ ನಿರೂಪಣೆ ಅಷ್ಟೆ. ನಾವೇನಾಗಿರುವೆವೊ, ಸುತ್ತಲೂ ಏನನ್ನು ನೋಡುತ್ತಿರುವೆವೊ ಅದರ ನಿರೂಪಣೆ.' (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ.೨.೭೧)

## ಈಶ್ವರನ ಆವಶ್ಯಕತೆ

ಅದ್ವಿತೀಯವಾದ ಬ್ರಹ್ಮವೇ ಮಾಯೆಯಿಂದಾಗಿ (ಮಾಯಾಶಕ್ತಿಯನ್ನಿಟ್ಟುಕೊಂಡು) ಸಗುಣ ಬ್ರಹ್ಮವಾಗಿ (ಈಶ್ವರ) ಈ ಜಗತ್ತಿಗೆ ಅಭಿನ್ನ ನಿಮಿತ್ತ ಉಪಾದಾನ ಕಾರಣವಾಗುತ್ತದೆ. ಇದೂ ಜಗತ್ತಿನ ದೃಷ್ಟಿಯಿಂದ. ಅಂದಮಾತ್ರಕ್ಕೆ ಸಗುಣ, ನಿರ್ಗುಣ ಎಂಬ ಎರಡು ಬ್ರಹ್ಮಗಳಿವೆ ಎಂದರ್ಥವಾಗುವುದಿಲ್ಲ. ಇವು ಸತ್ಯದ ಎರಡು ಮುಖಗಳು ಅಷ್ಟೆ. **ಪರಬ್ರಹ್ಮ ನಿರಾಕಾರವೂ ಹೌದು, ಸಾಕಾರವೂ ಹೌದು.** ಇವೆರಡನ್ನೂ ಮೀರಿದ್ದೂ ಹೌದು. ಅದರ ಶಕ್ತಿಯನ್ನು ಸೀಮಿತಗೊಳಿಸಲು ನಾವಾರು? ಭಗವಂತ ಸರ್ವಶಕ್ತನಾದರೆ ಒಂದು ರೂಪವನ್ನು ತಾಳಲಾರನೆ? ಎಲ್ಲೆಲ್ಲೂ ವ್ಯಾಪಕವಾಗಿರುವ ಸಾಗರದ ನೀರು ಶೈತ್ಯದಿಂದಾಗಿ ಗಡ್ಡೆ ಕಟ್ಟಿ, ಅಲ್ಲಲ್ಲಿ ತೇಲಾಡುತ್ತಿರುತ್ತದೆ. ಅಂತೆಯೇ ಭಕ್ತನ ಪ್ರೀತಿಯಿಂದಾಗಿ ನಿರಾಕಾರನಾದ ಪರಮಾತ್ಮ ಭಕ್ತನಿಗಾಗಿ ಆಕಾರವನ್ನು ತಾಳುತ್ತಾನೆ, ಅವನಿಗೆ ಎಲ್ಲವೂ ಸಾಧ್ಯ ಎನ್ನುತ್ತಾರೆ ಶ್ರೀ ರಾಮಕೃಷ್ಣ ಪರಮಹಂಸರು. **ಭಕ್ತ್ಯರ್ಥಂ ಕಲ್ಪಿತಂ** ದ್ವೈತಂ ಅದ್ವೈತಾದಪಿ ಸುಂದರಂ –ಭಕ್ತಿಗೋಸ್ಕರ ಕಲ್ಪಿಸಿರುವ ದ್ವೈತವು (ಭಕ್ತ-ಭಗವಂತ ಎಂಬ ದ್ವೈತಭಾವ ) ಅದ್ವೈತಕ್ಕಿಂತಲೂ ಸುಂದರವಾದುದು ಎನ್ನುತ್ತಾರೆ ಮಧುಸೂದನ ಸರಸ್ವತಿ.

> ಭಕ್ತಿಗೋಸ್ಕರ ಕಲ್ಪಿಸಿರುವ ದ್ವೈತವು(ಭಕ್ತ–ಭಗವಂತ ಎಂಬ ದ್ವೈತಭಾವ) ಅದ್ವೈತಕ್ಕಿಂತಲೂ ಸುಂದರವಾದುದು ಎನ್ನುತ್ತಾರೆ ಮಧುಸೂದನ ಸರಸ್ವತಿ.

ಸೃಷ್ಟಿ-ಸ್ಥಿತಿ-ಲಯಗಳಿಗೆ ಕರ್ತೃವಾದ ಸಗುಣಬ್ರಹ್ಮ ಅಥವಾ ಈಶ್ವರನು ಮನುಷ್ಯನ ಮನಸ್ಸು ಗ್ರಹಿಸಬಹುದಾದ (ವಿಷಯೀಕರಿಸಬಹುದಾದ) ಬ್ರಹ್ಮವಸ್ತು. ಅದ್ವೈತದ ಪರಾಕಾಷ್ಠೆಯನ್ನು ಮುಟ್ಟಿದ್ದ ಸ್ವಾಮಿ ವಿವೇಕಾನಂದರು ಭಕ್ತಿಯೋಗದ ಕುರಿತು ಮಾತನಾಡುತ್ತ ಹೀಗೆಂದಿದ್ದಾರೆ:

' "ದೇವಪುತ್ರನಾಗಿ" ಅಭಿವ್ಯಕ್ತಗೊಂಡಂತೆ ಅಲ್ಲದೆ ಬೇರೆ ರೀತಿಯಲ್ಲಿ ಭಗವಂತನನ್ನು ಯಾರೂ ಕಂಡಿಲ್ಲ. ನಾವು ಬೇರೆ ರೀತಿಯಲ್ಲಿ ನೋಡಲು ಪ್ರಯತ್ನ ಪಟ್ಟರೆ ದೇವರನ್ನು ಅತ್ಯಂತ ಹಾಸ್ಯಾಸ್ಪದವಾಗಿ ಚಿತ್ರಿಸುವೆವು.... ನಾವು ಎಲ್ಲಿಯವರೆಗೆ ಮಾನವರಾಗಿರುವೆವೊ, ಅಲ್ಲಿಯವರೆಗೆ ದೇವರು ಮಾನವನನ್ನು ಮೀರಿರುವನು ಎಂಬುದನ್ನು ತಿಳಿದುಕೊಳ್ಳಲಾರೆವು. ನಮ್ಮ ಮಾನವ ಸ್ವಭಾವವನ್ನು ಮೀರಿಹೋಗಿ ದೇವರ ನೈಜ ಸ್ವರೂಪವನ್ನು ತಿಳಿಯುವ ಸಮಯ ಬರುತ್ತದೆ. ಆದರೆ ಎಲ್ಲಿಯವರೆಗೆ ನಾವು ಮಾನವರಾಗಿರುವೆವೊ ಅಲ್ಲಿಯವರೆಗೆ ದೇವರನ್ನು ಮಾನವರೂಪದಲ್ಲಿ ಪೂಜಿಸಬೇಕು. ನಾವು ಬೇಕಾದಷ್ಟು ಬುದ್ಧಿವಂತಿಕೆಯ ಮಾತನಾಡಬಹುದು, ಬೇಕಾದಷ್ಟು ಪ್ರಯತ್ನ ಪಡಬಹುದು. ದೇವರನ್ನು ಮಾನವ ರೂಪಿನಿಂದ ಅಲ್ಲದೆ ಬೇರೆ ರೂಪಿನಿಂದ ತಿಳಿಯಲಾರೆವು...

'ಯಾರಾದರೂ ಮಾನವನಲ್ಲಿ ದೇವರ ಆರಾಧನೆಯನ್ನು ಖಂಡಿಸಿ ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದರೆ ಅವನನ್ನು ದೇವರೆಂದರೇನು, ಎಂದು ಕೇಳಿ. ಸರ್ವಶಕ್ತ, ಸರ್ವಜ್ಞ, ಸರ್ವವ್ಯಾಪಿ— ಈ ಎಲ್ಲ ಭಾವನೆಗಳು ಕೇವಲ ಶಬ್ದಗಳು, ಇದಕ್ಕಿಂತ ಹೆಚ್ಚು ಅವನಿಗೇನೂ ತಿಳಿದಿರುವುದಿಲ್ಲ. ಮಾನವ ಸ್ವಭಾವಕ್ಕೆ ಮೀರಿದ ಯಾವುದೇ ವಿಚಾರವನ್ನೂ ಆತ ಇವುಗಳ ಬಗ್ಗೆ ಹೇಳಲಾರ.' (ಕೃತಿಶ್ರೇಣಿ ೧.೧೫೩)

## ಭಕ್ತಿಮಾರ್ಗದ ಅನಿವಾರ್ಯತೆ

ಪರಿಶುದ್ಧ ಆತ್ಮನಿಗೆ ಸಂಸಾರ ಅಜ್ಞಾನದಿಂದ ಬಂದಿರುವುದರಿಂದ ಅದನ್ನು ಜ್ಞಾನದಿಂದ ಮಾತ್ರ ಹೋಗಲಾಡಿಸಲು ಸಾಧ್ಯ. ಇನ್ನಾವ ಪ್ರಯತ್ನದಿಂದಾಗಲಿ, ಕರ್ಮದಿಂದಾಗಲೀ ಸಾಧ್ಯವಿಲ್ಲವೆನ್ನುವುದು ಅದ್ವೈತ ವೇದಾಂತದ ತಿರುಳು. ಇದನ್ನು ಉಪನಿಷತ್ತುಗಳ ಆಧಾರದ ಮೇಲೆ ತರ್ಕಬದ್ಧವಾಗಿ ಶಂಕರರು ತಮ್ಮ ಕೃತಿಗಳಲ್ಲೆಲ್ಲ ಸ್ಪಷ್ಟಪಡಿಸಿರುವರಾದರೂ ಅವರಾಗಲೀ ಇತರ ಅದ್ವೈತಾಚಾರ್ಯರುಗಳಾಗಲೀ ಸಾಧನ ಮಾರ್ಗವಾಗಿ ಭಕ್ತಿಯ ಆವಶ್ಯಕತೆಯನ್ನು ಅಲ್ಲಗಳೆದಿಲ್ಲ. ಮಾತ್ರವಲ್ಲ ಅದರ ಅನಿವಾರ್ಯತೆಯನ್ನು ಒತ್ತಿ ಹೇಳಿದ್ದಾರೆ.

ಶಂಕರರು ರಚಿಸಿರುವ ಸ್ತೋತ್ರ ಸಂಕಲನಗಳನ್ನು ನಾವು ನೋಡಿದರೆ ಅಲ್ಲಿ ಅವರ ವ್ಯಕ್ತಿತ್ವದ ಇನ್ನೊಂದು ಮುಖ ಪರಿಚಯವಾಗುತ್ತದೆ. ಭಕ್ತಿಭಾವ ಅವುಗಳಲ್ಲಿ ಮನಮುಟ್ಟುವಂತೆ ಅಭಿವ್ಯಕ್ತವಾಗಿರುವುದು ಮಾತ್ರವಲ್ಲದೆ ಕಾವ್ಯದೃಷ್ಟಿಯಿಂದಲೂ ಅವು ಅತ್ಯಂತ ಸುಂದರ ಕೃತಿಗಳೆಂದು ಕಾವ್ಯಾಲಂಕಾರ ತಜ್ಞರೂ ಒಪ್ಪಬೇಕಾಗುತ್ತದೆ. ಶಿವಾನಂದ ಲಹರಿ ಎನ್ನುವ ಸುಮಾರು ೧೦೦ ಸ್ತೋತ್ರಗಳನ್ನೊಳಗೊಂಡ ಕೃತಿಯಲ್ಲಿ ಅವರು ಪರಶಿವನನ್ನು ಭಕ್ತಿಯಿಂದ ಹೀಗೆಂದು ಕೋರಿಕೊಳ್ಳುತ್ತಾರೆ :

ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ
ಮಯ್ಯೇವ ವಾಸಂ ಕುರು
ಸ್ವಾಮಿನ್ನಾದಿಕಿರಾತ ಮಾಮಕಮನಃ
ಕಾಂತಾರಸೀಮಾಂತರೇ |
ವರ್ತಂತೇ ಬಹುಶೋ ಮೃಗಾ ಮದಜುಷೋ
ಮಾತ್ಸರ್ಯಮೋಹಾದಯಃ
ತಾನ್ ಹತ್ವಾ ಮೃಗಯಾವಿನೋದರಚಿತಾ
ಲಾಭಂ ಚ ಸಂಪ್ರಾಪ್ಸ್ಯಸಿ ||

'ಹೇ ಗಿರಿಶ, ನನ್ನಲ್ಲಿಯೇ ವಾಸಿಸು, ಇಲ್ಲಿಗೆ ಅಲ್ಲಿಗೆ ಹೋಗಬೇಡ! ಸ್ವಾಮಿನ್, ಆದಿಕಿರಾತನೇ!ನನ್ನ ಮನಸ್ಸೆಂಬ ಅಡವಿಯೊಳಗೆ ಕಾಮ ಮದ ಮಾತ್ಸರ್ಯ ಮೋಹ ಮೊದಲಾದ ಅನೇಕ ಕೊಬ್ಬಿದ ಮೃಗಗಳಿವೆ.(ಈ ಅಡವಿಯಲ್ಲಿ ನೀನು ನೆಲಸಿದುದೇ ಆದರೆ) ಆ ಮೃಗಗಳನ್ನು ಕೊಂದು ಬೇಟೆಯ ವಿನೋದವನ್ನೂ, ಆನಂದವನ್ನೂ ಹೊಂದುತ್ತೀಯೆ!'

## ಜೀವ ಈಶ್ವರ ಸಂಬಂಧ

**ಭಗವಂತ ಭಕ್ತನಲ್ಲಿ ಎಂತಹ ಒಪ್ಪಂದ!** ಇಬ್ಬರಿಗೂ ಲಾಭ. ಜೀವೋ ಬ್ರಹ್ಮೈವ ನಾಪರಃ ಎಂದು ಅದ್ವೈತ ವೇದಾಂತ ಘೋಷಿಸಿದರೂ ಜೀವಭಾವವಿರುವವರೆಗೂ ಅದು ಸಾಧ್ಯವಾಗದ ಮಾತು. ಐಕ್ಯವನ್ನು ಹೇಳುವುದು ಜೀವ, ಈಶ್ವರ ಉಪಾಧಿರಹಿತನಾದ ಶುದ್ಧ ಚೈತನ್ಯಕ್ಕೆ. ಜೀವ, ಈಶ್ವರರುಗಳಿಗಲ್ಲ. ಆದ್ದರಿಂದ ಜೀವಭಾವವಿರುವ ಭಕ್ತ

ಭಗವಂತನಲ್ಲಿ ಹೀಗೆಂದು ಬೇಡಿಕೊಳ್ಳುತ್ತಾನೆ. ಜೀವ ಭಾವವಿರುವರೆಗೂ ಸ್ವಾಮಿ ಭೃತ್ಯ ಸಂಬಂಧ ಅನಿವಾರ್ಯ:

**ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಮ್।**
**ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತಾರಂಗಃ॥**

'ಹೇ ಪ್ರಭು! ಒಂದೊಮ್ಮೆ ನಿನ್ನ ನನ್ನಲ್ಲಿ ಭೇದ ಇಲ್ಲದೆ ಹೋದರೂ ನಾನು ನಿನ್ನವನಾಗುತ್ತೇನೆಯೇ ಹೊರತು ನೀನು ನನ್ನವನಾಗುವುದಿಲ್ಲ. ಸಮುದ್ರದಲ್ಲಿ ತರಂಗ ಲೀನವಾಗುತ್ತದೆ, ತರಂಗದಲ್ಲಿ ಸಮುದ್ರವಲ್ಲ.' ಈ ಅಹಂಕಾರವನ್ನು (ಜೀವ ಭಾವವನ್ನು) ಮೀರುವುದು ಬಹಳ ಕಷ್ಟ. ಆದ್ದರಿಂದ ನಾನು ಭಗವಂತನ ದಾಸ ಎನ್ನುವ ಅಹಂಕಾರವನ್ನಿಟ್ಟು ಕೊಂಡರೆ ಅದರಿಂದ ನಮಗೆ ಕೆಡುಕಾಗದು ಎನ್ನುತ್ತಾರೆ ಪರಮಹಂಸರು.

**ಜೀವ ಈಶ್ವರ ಭೇದ ಅವಿದ್ಯಾಕಲ್ಪಿತ, ವಾಸ್ತವವಲ್ಲ.** ವಾಸ್ತವ ವಲ್ಲದ್ದು ಕಾಣುವುದು ಹೇಗೆ, ಅದೂ ಸತ್ಯವಲ್ಲವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳಿದಾಗ ಅದು ಅನಿರ್ವಚನೀಯ ಎನ್ನುತ್ತಾರೆ. ಅವಿದ್ಯೆ ಅಥವಾ ಮಾಯೆ ಇದೆಯೋ ಇಲ್ಲವೊ? ಇದ್ದಲ್ಲಿ ಅದು ಬ್ರಹ್ಮವೇ? ಬ್ರಹ್ಮ ಕ್ಕಿಂತ ಭಿನ್ನವೇ?

ಸೋಽಯಂ ಭ್ರಾಂತಿರ್ನಿರಾಲಂಬಾ ಸರ್ವನ್ಯಾಯವಿರೋಧಿನೀ।
ಸಹತೇ ನ ವಿಚಾರಂ ಸಾ ತಮೋ ಯದ್ವದ್ದಿವಾಕರಮ್॥

ಹೇಗೆ ಕತ್ತಲು ಸೂರ್ಯನ ಪ್ರಕಾಶವನ್ನು ಸಹಿಸುವುದಿಲ್ಲವೋ ಹಾಗೆಯೇ ಈ ಅವಿದ್ಯೆ (ಭ್ರಾಂತಿ) ಯಾವ ವಿಚಾರವನ್ನೂ ಸಹಿಸುವುದಿಲ್ಲ, ಅದಕ್ಕೆ ಯಾವ ಆಧಾರವೂ ಇಲ್ಲ ಎನ್ನುತ್ತಾರೆ. ಭಕ್ತನಾದರೊ ಇವೆಲ್ಲ ಭಗವಂತನ ಲೀಲೆ ಎಂದೇ ತೃಪ್ತನಾಗುತ್ತಾನೆ. ಅದನ್ನೇ ಶಂಕರರು ತಮ್ಮ ದೇವೀ ಭುಜಂಗಸ್ತೋತ್ರದಲ್ಲಿ ಹೀಗೆ ಹೇಳುತ್ತಾರೆ :

ವಿನೋದಾಯ ಚೈತನ್ಯಮೇಕಂ ವಿಭಜ್ಯ
ದ್ವಿಧಾ ದೇವಿ ಜೀವಃ ಶಿವಶ್ಚೇತಿ ನಾಮ್ನಾ।
ಶಿವಸ್ಯಾಪಿ ಜೀವತ್ವಮಾಪಾದಯಂತಿ
ಪುನರ್ಜೀವಮೇನಂ ಶಿವಂ ವಾ ಕರೋಷಿ॥
(ದೇವೀಭುಜಂಗಸ್ತೋತ್ರ,೪)

'ಹೇ ದೇವೀ, ಕೇವಲ ವಿನೋದಕ್ಕಾಗಿ ಅವಿಭಾಜ್ಯ ಚೈತನ್ಯವನ್ನು ಜೀವ ಶಿವರೆಂಬುದಾಗಿ ವಿಂಗಡಿಸಿ ಆ ಶಿವನಿಗೇ ಜೀವತ್ವವನ್ನು ನೀಡುತ್ತೀಯೆ. ನಿನಗೆ ಸಾಕೆಂದೆನಿಸಿದಾಗ ಆ ಜೀವನನ್ನೇ ಶಿವನನ್ನಾಗಿ ಮಾಡುತ್ತೀಯೆ.' ನಿತ್ಯ ಮತ್ತು ಲೀಲೆ ಎರಡೂ ಭಗವಂತನದೇ ಸ್ವರೂಪ ಎನ್ನುತ್ತಾರೆ ಶ್ರೀರಾಮಕೃಷ್ಣರು.

ಭಕ್ತಿಯೆಂದರೇನೆನ್ನುವುದನ್ನು ಸುಂದರವಾಗಿ ಇನ್ನೊಂದು ಶ್ಲೋಕ ದಲ್ಲಿ ಹೀಗೆ ವಿವರಿಸುತ್ತಾರೆ:

ಅಂಕೋಲಂ ನಿಜಬೀಜ ಸಂತತಿ–
ರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜ ವಿಭುಂ ಲತಾ ಕ್ಷಿತಿರುಹಂ
ಸಿಂಧುಃ ಸರಿದ್ವಲ್ಲಭಮ್।
ಪ್ರಾಪ್ನೋತೀಹ ಯಥಾ ತಥಾ
ಪಶುಪತೇಃ ಪಾದಾರವಿಂದದ್ವಯಂ
ಚೇತೋ ವೃತ್ತಿರುಪೇತ್ಯ ತಿಷ್ಠತಿ
ಸದಾ ಸಾ ಭಕ್ತಿರಿತ್ಯುಚ್ಯತೇ॥


ಶ್ರೀ ಶಂಕರಾಚಾರ್ಯರು

'ಈ ಲೋಕದಲ್ಲಿ ಅಂಕೋಲದ ಬೀಜಗಳು ಪುನಃ ಅದೇ ಮರವನ್ನೂ, ಸೂಜಿಯು ಅಯಸ್ಕಾಂತಶಿಲೆಯನ್ನೂ, ಪತಿವ್ರತೆಯು ತನ್ನ ಪತಿಯನ್ನೂ, ಬಳ್ಳಿಯು ಮರವನ್ನೂ, ನದಿಯು ಸಮುದ್ರವನ್ನೂ ಹೇಗೆ ಆಶ್ರಯಿಸುತ್ತವೆಯೋ ಹಾಗೆ ಮನೋವೃತ್ತಿಯು ಪಶುಪತಿಯ ಪಾದಾರವಿಂದದ್ವಯವನ್ನು ಬಳಿಸಾರಿ ಸದಾ ಅವುಗಳಲ್ಲಿ ನಿಂತರೆ ಅದು ಭಕ್ತಿಯೆನ್ನಿಸುವುದು.'

## ಅನುಭವ ಪ್ರಾಧಾನ್ಯ

ಶಾಸ್ತ್ರ, ತರ್ಕ, ಯುಕ್ತಿಗಳು ಸತ್ಯಾನ್ವೇಷಣೆಯಲ್ಲಿ ಸಹಕಾರಿ ಕಾರಣಗಳಾಗಬಹುದಾದರೂ ಅವೆಲ್ಲವೂ ಕೊನೆಗೆ ಅನುಭವದಲ್ಲಿ ಪರ್ಯವಸಾನವಾಗಬೇಕು. ಧರ್ಮ ಜಿಜ್ಞಾಸೆಗೆ —ಇಲ್ಲಿ ಮಾಡತಕ್ಕ ವೇದೋಕ್ತ ಕರ್ಮಗಳಿಗೆ ಇನ್ನೊಂದು ಲೋಕದಲ್ಲಿ ಫಲ ದೊರಕುತ್ತದೆ ಎನ್ನುವುದಕ್ಕೆ ಶಾಸ್ತ್ರ ಒಂದೇ ಪ್ರಮಾಣ. **'ತಿರುಗಿ ಬಂದವರಿಲ್ಲ, ವರದಿ ತಂದವರಿಲ್ಲ.'** ಆದರೆ ಬ್ರಹ್ಮ ಜಿಜ್ಞಾಸೆಗೆ ಅನುಭವವೇ ಫಲ. ಬರೀ ತರ್ಕದಿಂದಲೇ ಸತ್ಯವನ್ನು ಸಾಧಿಸಲು ಅಸಾಧ್ಯ. ಅದು ವೃಥಾ ಕಂಠಕ್ಷೋಭೆಯಾದೀತು ಎನ್ನುವುದನ್ನು ಅವರು ಹೀಗೆ ಹೇಳುತ್ತಾರೆ :

ಘಟೋ ವಾ ಮೃತ್ಪಿಂಡೋಽ–
ಪ್ಯಣುರಪಿ ಚ ಧೂಮೋಽಗ್ನಿರಚಲಃ
ಪಟೋ ವಾ ತಂತುರ್ವಾ
ಪರಿಹರತಿ ಕಿಂ ಘೋರಶಮನಮ್।

**ಪಂಚಾಂಗ ಇಡೀ ವರ್ಷದಲ್ಲಿ ಬರಬಹುದಾದ ಮಳೆಯನ್ನು ಸೂಚಿಸುತ್ತದಾದರೂ ಅದನ್ನು ಹಿಂಡಿದರಲ್ಲಿ ಒಂದು ತೊಟ್ಟು ನೀರೂ ಬರಲಾರದು**

**ಶ್ರೀರಾಮಕೃಷ್ಣ**

ವೃಥಾ ಕಂಠಕ್ಷೋಭಂ
ವಹಸಿ ತರಸಾ ತರ್ಕವಚಸಾ
ಪದಾಂಭೋಜಂ ಶಂಭೋ-
ರ್ಭಜ ಪರಮಸೌಖ್ಯಂ ವ್ರಜ ಸುಧೀಃ ||

'ಹೇ (ತರ್ಕಶಾಸ್ತ್ರನಿಪುಣನಾದ) ವಿದ್ವಾಂಸನೇ, ಘೋರನಾದ ಯಮನನ್ನು ಮಡಕೆಯಾಗಲೀ, ಮಣ್ಣಿನ ಮುದ್ದೆಯಾಗಲೀ, ಪರಮಾಣುವಾಗಲೀ, ಹೊಗೆಯಾಗಲೀ, ಬೆಂಕಿಯಾಗಲೀ, ಬೆಟ್ಟವಾಗಲೀ, ಬಟ್ಟೆಯಾಗಲೀ, ನೂಲಾಗಲೀ ಪರಿಹರಿಸಲಾರದು. ಇಂತಹ ತರ್ಕಶಾಸ್ತ್ರದ ಮಾತುಗಳಿಂದ ವ್ಯರ್ಥವಾಗಿ ಕಂಠಕ್ಷೋಭವನ್ನು ಮಾಡಿಕೊಳ್ಳುತ್ತಿದ್ದೀಯೆ. (ಅವನ್ನು ಬಿಟ್ಟು) ಶೀಘ್ರವಾಗಿ ಶಂಭುವಿನ ಪದಕಮಲವನ್ನು ಭಜಿಸು; ಪರಮ ಸೌಖ್ಯವನ್ನು ಹೊಂದು.' 'ಮಮತೆಯೊಳವಿಂ ಜ್ಞಾನ ಪಾಂಡಿತ್ಯದಿಂದಲ್ಲ' ಎನ್ನುವುದನ್ನು ಮೇಲಿನ ಶ್ಲೋಕದಲ್ಲಿ ಮನಮುಟ್ಟುವಂತೆ ಹೇಳುತ್ತಾರೆ. ಪಂಚಾಂಗ ಇಡೀ ವರ್ಷದಲ್ಲಿ ಬರಬಹುದಾದ ಮಳೆಯನ್ನು ಸೂಚಿಸುತ್ತದಾದರೂ ಅದನ್ನು ಹಿಂಡಿದಲ್ಲಿ ಒಂದು ತೊಟ್ಟು ನೀರೂ ಬರಲಾರದು ಎನ್ನುತ್ತಾರೆ ಪರಮಹಂಸರು.

ಭಕ್ತಿಯ ಮೂಲಕವೂ ಆತ್ಯಂತಿಕ ಆಧ್ಯಾತ್ಮಿಕ ಅನುಭವವನ್ನು ಪಡೆಯಬಹುದೆಂಬುದನ್ನು ಶ್ರೀರಾಮಕೃಷ್ಣರು ಮತ್ತು ಇತರ ಅನೇಕ ಸಂತರು ತಮ್ಮ ಜೀವನದ ಮೂಲಕ ತೋರಿಸಿ ಕೊಟ್ಟಿದ್ದಾರೆ. ಅಂತಹ ಅದ್ವೈತಾನುಭವವನ್ನು ಪಡೆದ ಜೀವನ್ಮುಕ್ತನ ಪೂಜಾವಿಧಾನ ಹೇಗಿರುತ್ತದೆಂಬುದನ್ನು ಶ್ರೀಶಂಕರಾಚಾರ್ಯರು ಭಕ್ತಿ-ಜ್ಞಾನಗಳ ಸಮನ್ವಯದಂತಿರುವ ಈ ಕೆಳಗಿನ ಶ್ಲೋಕದಲ್ಲಿ ವರ್ಣಿಸುತ್ತಾರೆ :

ಆತ್ಮಾ ತ್ವಂ ಗಿರಿಜಾಮತಿಃ ಸಹಚರಾಃ
ಪ್ರಾಣಾಃ ಶರೀರಂ ಗೃಹಂ
ಪೂಜಾ ತೇ ವಿಷಯೋಪಭೋಗರಚನಾ
ನಿದ್ರಾ, ಸಮಾಧಿಸ್ಥಿತಿಃ |
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ
ಸ್ತೋತ್ರಾಣಿ ಸರ್ವಾ ಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ
ಶಂಭೋ ತವಾರಾಧನಮ್ ||

(ಶಿವಮಾನಸ ಪೂಜಾ)

'ಹೇ ಶಂಭುವೇ, ನೀನೇ (ನನ್ನ) ಆತ್ಮ, ಪಾರ್ವತಿಯೆ ಮನಸ್ಸು, (ನಿನ್ನ) ಸಹಚರರು ಪ್ರಾಣಗಳು, (ಈ) ಶರೀರವೇ (ನಿನ್ನ) ಮನೆ, ವಿಷಯಾನುಭವ ಕ್ರಿಯೆಗಳೇ ನಿನ್ನ ಪೂಜೆ. ನಿದ್ರೆಯೇ ಸಮಾಧಿಸ್ಥಿತಿ, ಕಾಲಿನಲ್ಲಿ ನಡೆದಾಡುವುದೆಲ್ಲ ನಿನಗೆ ಪ್ರದಕ್ಷಿಣೆ, ಆಡುವ ಮಾತುಗಳೆಲ್ಲವೂ (ನಿನ್ನ) ಸ್ತೋತ್ರಗಳು. ನಾನು ಮಾಡುವ ಕೆಲಸಗಳೆಲ್ಲವೂ ನಿನ್ನ ಆರಾಧನೆ.'

## ಪ್ರಾರ್ಥನೆಯ ಶಕ್ತಿ

ಶ್ರೀರಾಮಕೃಷ್ಣರ ಮಹಾಸಮಾಧಿಯ ಕೆಲವು ದಿನಗಳ ಬಳಿಕ ಅಯೋಧ್ಯೆಯ ಸಾಧುವೊಬ್ಬ ದಕ್ಷಿಣೇಶ್ವರಕ್ಕೆ ಬಂದ. ಅಲ್ಲಿ ಪೂಜಾರಿಯಾಗಿದ್ದ ರಾಮಲಾಲನನ್ನು 'ನಾನು ಪರಮಹಂಸರನ್ನು ಕಾಣಬೇಕು. ಅವರೆಲ್ಲಿದ್ದಾರೆ ?' ಎಂದು ಕೇಳಿದ. ರಾಮಲಾಲ ಶ್ರೀರಾಮಕೃಷ್ಣರು ತೀರಿಕೊಂಡ ವಿಷಯವನ್ನು ತಿಳಿಸಿದಾಗ ಸಾಧುವಿಗೆ ಭಾರಿ ಆಘಾತವುಂಟಾಯಿತು. ಅಯೋಧ್ಯೆಯಲ್ಲಿ ಬಹುಕಾಲ ತಪಸ್ಸು ಮಾಡುತ್ತಿದ್ದ ಅವನಿಗೆ ಮೂರುತಿಂಗಳ ಹಿಂದೆ ಇಷ್ಟದೇವತೆಯ ದರ್ಶನವಾಗಿ, ದಕ್ಷಿಣೇಶ್ವರಕ್ಕೆ ಹೋಗಿ ಅಲ್ಲಿ ಶ್ರೀರಾಮಕೃಷ್ಣರಾಗಿ ಅವತರಿಸಿರುವ ತನ್ನನ್ನು ಭೇಟಿಯಾಗಲು ಆದೇಶವಾಗಿತ್ತು. ಅದರಂತೆ ಮೂರು ತಿಂಗಳು ನಡೆದೇ ಅವನು ಇಲ್ಲಿಗೆ ಬಂದಿದ್ದ. ರಾಮಲಾಲನ ಮಾತು ಕೇಳಿ ಬೆಚ್ಚಿಬಿದ್ದ ಅವನು ನೆಲದಲ್ಲಿ ಹೊರಳಾಡಿ ಅಳತೊಡಗಿದ. ಇಡೀ ದಿನ ಹಾಗೆಯೇ ಕಳೆಯಿತು. ಮರುದಿನ ಬೆಳಿಗ್ಗೆ ರಾಮಲಾಲ ಅವನನ್ನು ಸಮಾಧಾನಪಡಿಸಲು ಹೋದ, ಆಹಾರ, ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದ. 'ಹೋಗಾಚೆ! ಅದಕ್ಕಾಗಿ ನಾನು ಬಂದಿಲ್ಲ' ಎಂದ ಆ ಸಾಧು. ಹೀಗೆ ಮೂರು ದಿನ ಕಳೆಯಿತು. ನಾಲ್ಕನೇ ದಿನ ಬೆಳಿಗ್ಗೆ ಅವನು ರಾಮಲಾಲನ ಬಳಿಗೆ ಬಂದು ಅವನನ್ನು ಅಲುಗಾಡಿಸಿ, ಆನಂದಾತಿರೇಕದಿಂದ ಹೇಳಿದ : 'ನಿನಗವರು ಕಾಣಿಸುತ್ತಿಲ್ಲವೆ?' ಹಸಿವು, ಆಯಾಸಗಳಿಂದ ಈತ ಹುಚ್ಚನಾಗಿರಬೇಕು ಎಂದುಕೊಂಡ ರಾಮಲಾಲ. ಸಾಧು ಮುಂದುವರಿಸಿದ : 'ಅವರ ಮರದ ಚಪ್ಪಲಿ ಸದ್ದು ನಿನಗೆ ಕೇಳಿಸುತ್ತಿಲ್ಲವೆ? ಪಂಚವಟಿಯ ಕಡೆಯಿಂದ ಬಂದ ಅವರು ನನ್ನ ಬೆನ್ನು ತಟ್ಟಿ, "ನೀನೇನು ಮಾಡುತ್ತಿರುವೆ ? ಯಾಕೆ ಅಳುತ್ತಿದ್ದೀಯೆ? ನಾನೆಲ್ಲಿಗೆ ಹೋಗಿದ್ದೇನೆ! ನನ್ನತ್ತ ಒಂದು ಬಾರಿ ನೋಡು!" ಎಂದರು. ನಾನು ಅವರತ್ತ ನೋಡಿದೆ. ನನ್ನನ್ನವರು ಆಲಂಗಿಸಿಕೊಂಡರು. ಗಂಗಾನದಿಗೆ ಕರೆದೊಯ್ದು ಮುಖ ತೊಳೆಯಲು ಹೇಳಿದರು. ಬಳಿಕ "ಏಳು ದಿನಗಳಿಂದ ನೀನೇನೂ ತಿಂದಿಲ್ಲ" ಎಂದು ಈ ಪಾಯಸವನ್ನಿತ್ತರು. ಆದರೆ ಕಣ್ಣೀರಧಾರೆಯಿಂದ ತೊಯ್ದ ಕಣ್ಣುಗಳಿಂದ ನಾನು ಅವರನ್ನೇ ನೋಡುತ್ತಿದ್ದೆ. ಪಾಯಸ ತಿನ್ನದಾದೆ.ಸ್ವಲ್ಪ ಹೊತ್ತಿನಲ್ಲಿ ಅವರು ಮರೆಯಾದರು. ನನ್ನ ಹೃದಯ ಆನಂದದಿಂದ ತುಂಬಿಹೋಯಿತು.'

ಶ್ರೀರಾಮಕೃಷ್ಣರು 'ವಚನವೇದ'ದಲ್ಲಿ ಹೇಳಿದ್ದಾರೆ : 'ಮೂರು ಹಗಲು, ಮೂರು ರಾತ್ರಿ ಒಂದೇ ಸಮನೆ ಪ್ರಾರ್ಥಿಸಿದರೆ ನಿನಗೆ ಭಗವಂತನ ದರ್ಶನ ದೊರಕುವುದು' ಎಂದು. ಈ ಮೇಲಿನ ಘಟನೆ ಅವರ ಮಾತಿನ ಸತ್ಯವನ್ನು ದೃಢೀಕರಿಸಿತು. *ಪ್ರಾರ್ಥನೆಗಿರುವ ಶಕ್ತಿ ಅಪಾರ.*